# ಜನಾರೋಗ್ಯ ಆಂದೋಲನ ಬೆಂಗಳೂರು ಶಾಖೆ ಅಯೋಜಿಸಿದ ಸಾರ್ವಜನಿಕ ಸಮಾಲೋಚನೆಯ ವರದಿ

ಬೆಂಗಳೂರು ನಗರದಲ್ಲಿ ಆರೋಗ್ಯ ಸೌಲಭ್ಯಗಳು-ಸಮಗ್ರ ಅರೋಗ್ಯ ಯೋಜನೆಯ ಅಗತ್ಯತೆ ಕುರಿತ ಒಂದು ಸಾರ್ವಜನಿಕ ಸಮಾಲೋಚನೆಯನ್ನು ಜನಾರೋಗ್ಯ ಆಂದೋಲನ ಕರ್ನಾಟಕ- ಬೆಂಗಳೂರು ನಗರ ಶಾಖೆಯ ವತಿಯಿಂದ ಮಾರ್ಚ್ 9, 2012 ರಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ನಗರ ಆರೋಗ್ಯ ಸಂಶೋಧನೆ ಮತ್ತು ತರಬೇತಿ ಕೇಂದ್ರ (ಬಿಬಿಎಂಪಿ) ದಲ್ಲಿ ಹಮ್ಮಿಕೊಳ್ಳಲಾಗಿತ್ತು. ಬಿಬಿಎಂಪಿ ಆಯುಕ್ತರಾದ ಶ್ರೀ ಶಂಕರಲಿಂಗೇಗೌಡರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಬಿಬಿಎಂಪಿಯ ಮತ್ತು ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಜನಾರೋಗ್ಯ ಆಂದೋಲನದ ಸದಸ್ಯರು ಅರೋಗ್ಯ ವ್ಯವಸ್ಥೆಯ ಸ್ಥೂಲ ಚಿತ್ರಣವನ್ನು ನೀಡಿದರು. ಸ್ವಯಂ ಸೇವಾ ಸಂಸ್ಥೆಗಳ, ಸಂಘಟನೆಗಳ, ವಿವಿಧ ಆಸ್ಪತ್ರೆಗಳ ಪ್ರತಿನಿಧಿಗಳು ಮತ್ತು ಆರೋಗ್ಯ ಕ್ಷೇತ್ರದ ಬಗ್ಗೆ ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವ ಆಸಕ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡು ಸಲಹೆಗಳನ್ನು ನೀಡಿದರು.

## ಚರ್ಚಾ ವಿಷಯಗಳು

ಪ್ರಾಥಮಿಕ ಆರೋಗ್ಯ ಸೇವೆ ಮತ್ತು ಸಾರ್ವಜನಿಕ ಆರೋಗ್ಯ ವಿಧಾನವನ್ನು ಆರೋಗ್ಯ ಯೋಜನೆಗಳಲ್ಲಿ ಅಳವಡಿಸಬೇಕಾದ ಪ್ರಾಮುಖ್ಯತೆಯನ್ನು ಅಧಿಕಾರಿಗಳನ್ನೊಳಗೊಂಡಂತೆ ಎಲ್ಲರೂ ಎತ್ತಿಹಿಡಿದರು. ಜನಾರೋಗ್ಯ ಆಂದೋಲನದ ವಿಷಯ ಮಂಡನೆಯಲ್ಲಿ ಆರೋಗ್ಯ ಸೇವೆಗಳೇ ಇಲ್ಲದ ವಾರ್ಡ್‌ಗಳ ಬಗ್ಗೆ ಮತ್ತು ಲಭ್ಯವಿರುವ ಸೇವೆಗಳಲ್ಲಿಯೂ ಕಂಡುಬರುವ ಲೋಪಗಳ ಬಗ್ಗೆ ಪ್ರಸ್ತಾಪಿಸಲಾಯಿತು. ಬಿಬಿಎಂಪಿ ಅಧಿಕಾರಿಗಳು ಪ್ರಸೂತಿ ಮತ್ತು ಶಿಶು ಆರೋಗ್ಯ ರಕ್ಷಣೆಗಾಗಿ ಹೆರಿಗೆ ಆಸ್ಪತ್ರೆಗಳನ್ನು ಪ್ರಾರಂಭಿಸಲು ದಾನಿಗಳ ಕೊಡುಗೆ ಮತ್ತು ಅವರ ಆಸೆಗಳ ಮೇರೆಗೆ ಹೇಗೆ ಈ ಆಸ್ಪತ್ರೆಗಳು ಪ್ರಾರಂಭವಾದವು ಎಂಬುದನ್ನು ವಿವರಿಸಿದರು. ಬೆಂಗಳೂರು ನಗರದಲ್ಲಿ ಇದುವರೆಗೂ ಜನಸಂಖ್ಯೆಗನುಗುಣವಾಗಿ ಸಮಗ್ರ ಆರೋಗ್ಯ ಯೋಜನೆಯನ್ನು ರೂಪಿಸಿಲ್ಲ. ಆರೋಗ್ಯ ಸೇವೆ ಒದಗಿಸುತ್ತಿರುವ ವಿವಿಧ ಇಲಾಖೆಗಳ ನಡುವಿನ ಹೊಂದಾಣಿಕೆ ತುಂಬಾ ಸೀಮಿತವಾಗಿದ್ದು ಅದನ್ನು ಹೆಚ್ಚಿಸುವ ಅಗತ್ಯವಿದೆ. 2007ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದ ನಂತರ ಜಂಟಿ ಯೋಜನೆಗಳನ್ನು ರೂಪಿಸಿಲ್ಲ. ಹಾಗೆಯೇ ಬಿಬಿಎಂಪಿವ್ಯಾಪ್ತಿಯಲ್ಲಿನ ಹಲವಾರು ಪ್ರದೇಶಗಳಿಗೆ ಆರೋಗ್ಯ ಸೇವೆಗಳು ಲಭ್ಯವಿಲ್ಲ ಅಥವಾ ಒದಗಿಸುತ್ತಿರುವ ಸೇವೆಗಳಲ್ಲಿ ಕೊರತೆಗಳಿವೆ. ಇದು ಅರೋಗ್ಯ ಸೇವೆಗಳನ್ನು ಒದಗಿಸುವುದರಲಿ ನಿರ್ಲಕ್ಷತೆಗೆ ದಾರಿಮಾಡಿ ರೋಗಿಗಳು ಖಾಸಗೀ ವಲಯದ ಮೇಲೆ ಅತಿಯಾಗಿ ಅವಲಂಬಿತರಾಗುವಂತೆ ಮಾಡುತ್ತಿದ್ದು, ಇದು ರೋಗಿಗಳ ಮೇಲೆ ಅತಿಯಾದ ವೆಚ್ಚದ ಹೊರೆಯೊಂದಿಗೆ ಅನಗತ್ಯ ತಜ್ಞ ವೈದ್ಯಕೀಯ ಪರೀಕ್ಷೆಗಳಿಗೆ ಎಡೆಮಾಡಿಕೊಟ್ಟಿದೆ. ಪ್ರಾಥಮಿಕ ಆರೋಗ್ಯ ಸೇವೆಯನ್ನೊದಗಿಸುವ ನಿಟ್ಟಿನಲ್ಲಿ ದಾದಿ ಮತ್ತು ಇತರ ವೈದ್ಯಕೀಯ ಸಿಬ್ಬಂದಿಗಳಿಗೆ ಹೆಚ್ಚಿನ ಜವಾಬ್ದಾರಿಗಳನ್ನು ನೀಡುವ ಅಗತ್ಯತೆ ಕುರಿತು ಸಹ ಚರ್ಚಿಸಲಾಯಿತು. 24X7 ನಿರಂತರವಾಗಿ ಕಾರ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದಾದಿಯರ ಕಾರ್ಯಕ್ಷಮತೆಯಿಂದ ಯಶಸ್ವಿಯಾಗಿ ನಡೆಯುತ್ತಿರುವ ಕಾರಣ ಇದೇ ಮಾದರಿಯನ್ನು ಬೆಂಗಳೂರು ನಗರದಲ್ಲಿಯೂ ಸಹ ಅಳವಡಿಸಿಕೊಳ್ಳಬಹುದು ಎಂಬ ಸಲಹೆ ಮೂಡಿಬಂದಿತು. ಆರ್‌ಎಸ್‌ಬಿವೈ ಮತ್ತು ವಾಜಪೇಯಿ ಆರೋಗ್ಯಶ್ರೀ ಮುಂತಾದ ಅರೋಗ್ಯ ವಿಮಾ ಯೋಜನೆಗಳಲ್ಲಿ ಅಸಂಘಟಿತ ವಲಯಗಳ (ಈಗ ಕಾರ್ಮಿಕ ಇಲಾಖೆ ಕೂಡ ಇದರಲ್ಲಿ ಭಾಗಿಯಾಗಿದೆ) ಕಾರ್ಮಿಕರನ್ನು ದಾಖಲಿಸಲಾಗುತ್ತಿದೆ. ಆದರೆ ಇಂತಹ ಯೋಜನೆಗಳು ಆರೋಗ್ಯ ಸೇವೆಗಳನ್ನು ಬಿಡಿಬಿಡಿಯಾಗಿಸುತ್ತವೆ ಹೊರತು, ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಪರ್ಯಾಯವಾಗುವುದಿಲ್ಲ.

ವಸತಿ ಹೀನರು ಮತ್ತು ವಿಕಲ ಚೇತನರು ಮುಂತಾದ ದುರ್ಬಲ ವರ್ಗದವರ ಅಗತ್ಯಗಳ ಕುರಿತಾಗಿ ಸಹ ಈ ಸಭೆಯಲ್ಲಿ ಚರ್ಚಿಸಲಾಯಿತು. ನವಜಾತ ಶಿಶುಗಳಲ್ಲಿ ಅಂಗವೈಕಲ್ಯವನ್ನು ಗುರುತಿಸಲು ಅಗತ್ಯವಾದ ತಪಾಸಣೆಗಳನ್ನು ಏಳು ಹೆರಿಗೆ ಆಸ್ಪತ್ರೆಗಳಲ್ಲಿ ಪ್ರಾರಂಭಿಸಲಾಗಿದ್ದು ಇದನ್ನು ಎಲ್ಲಾ ಆಸ್ಪತ್ರೆಗಳಿಗೆ ವಿಸ್ತರಿಸಬೇಕಿದೆ. ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಮಾನಸಿಕ ಆರೋಗ್ಯ ಸಮಸ್ಯೆಗಳು ಮತ್ತು ಆತ್ಮಹತ್ಯೆಗಳ ಹಿನ್ನೆಲೆಯಲ್ಲಿ ಮಾನಸಿಕ ಆರೋಗ್ಯ ಸೇವೆಗಳನ್ನು ಸಹ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದೊರೆಯುವ ವ್ಯವಸ್ಥೆ ಮಾಡಬೇಕಿದೆ ಎಂಬ ಸಲಹೆ ಮೂಡಿಬಂದಿತು.

ಸಾರ್ವಜನಿಕ ಭಾಗವಹಿಸುವಿಕೆ ಮತ್ತು ಕುಂದುಕೊರತೆ ನಿವಾರಣಾ ವ್ಯವಸ್ಥೆ ಕುರಿತು ಸಹ ವಿಸ್ತೃತ ಚರ್ಚೆಯಾಯಿತು. ಕೆಲವು ಸ್ವಯಂ ಸೇವಾ ಸಂಸ್ಥೆಗಳು ಸಮುದಾಯ ಸದಸ್ಯರನ್ನೊಳಗೊಂಡ ಮೇಲ್ವಿಚಾರಣಾ ಸಮಿತಿಗಳನ್ನು ಹೆರಿಗೆ ಆಸ್ಪತ್ರೆಗಳಲ್ಲಿ ರಚಿಸಿ ಹೆರಿಗೆ ಆಸ್ಪತ್ರೆಯ ಆಡಳಿತ ಮತ್ತು ಸಮುದಾಯದ ನಡುವೆ ಒಂದು ಸಂಪರ್ಕವನ್ನು ಬೆಳೆಸಿದ್ದಾರೆ. ಈ ಕಾರ್ಯಕ್ರಮವನ್ನು ಇತರ ಹೆರಿಗೆ ಆಸ್ಪತ್ರೆಗಳಿಗೆ ಕೂಡ ವಿಸ್ತರಿಸುವ ಅಗತ್ಯವಿದೆ. ಕುಂದುಕೊರತೆಗಳನ್ನು ನಿವಾರಿಸಲು ಬಿಬಿಎಂಪಿಯು 24 ಗಂಟೆ ಕಾರ್ಯನಿರತ **22660000** ಶುಲ್ಕ ರಹಿತ ದೂರವಾಣಿಗೆ ಸಂಖ್ಯೆಗೆ ಸಂಪರ್ಕಿಸಿ ದೂರುಗಳನ್ನು ದಾಖಲಿಸಲು ಸೂಚಿಸಲಾಯಿತು. ಹಾಗೆಯೇ ಆರೋಗ್ಯ ಸೇವೆಗಳನ್ನು ಸೇವಾ ಖಾತರಿ ಕಾಯ್ದೆಯಡಿ (ಸಕಾಲ) ಯಲ್ಲಿ ತಂದು ಸೇವೆಗಳ ಹೊಣೆಗಾರರಾದ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸದೇ ಸ್ಕ್ಯಾನಿಂಗ್‌ನಂತಹ ಸೇವೆಗಳನ್ನು ಒದಗಿಸದಿದ್ದರೆ ಅವರಿಗೆ ದಂಡ ವಿಧಿಸಬೇಕು. ಜೆಎಸ್‌ವೈ ನಂತಹ ಯೋಜನೆಗಳನ್ನು ಪಡೆದುಕೊಳ್ಳುವಲ್ಲಿ ಕೂಡ ಹಲವಾರು ತೊಂದರೆಗಳಿದ್ದು ಬಿಬಿಎಂಪಿಯು ಬಿಪಿಎಲ್ ರೋಗಿಗಳನ್ನು ದಾಖಲಿಸಲು ಪ್ರತಿ ಕೇಂದ್ರಗಳಲ್ಲಿ ಎಎನ್‌ಎಂಗಳು ಲಭ್ಯವಾಗುವಂತೆ ಮಾಡಲು ಯೋಜನೆಯನ್ನು ರೂಪಿಸಿದೆ.

## ತೀರ್ಮಾನಗಳು/ನಿರ್ಧಾರಗಳು:

ಕಾರ್ಯಕ್ರಮದಲ್ಲಿ ಹಾಜರಿದ್ದ ಅಧಿಕಾರಿಗಳು ಈ ಕೆಳಗಿನ ನಿರ್ಧಾರಗಳನ್ನು ತೆಗೆದುಕೊಂಡರು.

- ಆರೋಗ್ಯ ಸೇವೆಯನ್ನು ನೀಡುತ್ತಿರುವ ವಿವಿಧ ಇಲಾಖೆಗಳೊಂದಿಗೆ ಜಂಟಿ ಯೋಜನೆಗಳನ್ನು ರೂಪಿಸಲು ಬಿಬಿಎಂಪಿಯು ನಾಯಕತ್ವವನ್ನು ವಹಿಸಿಕೊಳ್ಳಬೇಕು.
- ಸ್ಕ್ಯಾನಿಂಗ್ ಮತ್ತು ಇತರ ತಪಾಸಣೆಗಳನ್ನು ಮಾಡಿಸಿಕೊಳ್ಳಲು ಬೇರಾವುದೇ ಖಾಸಗೀ ಪರೀಕ್ಷಾ ಕೇಂದ್ರಗಳಿಗೆ ಕಳುಹಿಸದೇ ವಿಕ್ಟೋರಿಯಾ ಅಥವಾ ಇನ್ನಾವುದೇ ಸರ್ಕಾರಿ ಸಂಸ್ಥೆಗಳಿಗೆ ರೋಗಿಗಳನ್ನು ಕಳುಹಿಸಬೇಕು.

## ಜನಾರೋಗ್ಯ ಆಂದೋಲನದ ಬೇಡಿಕೆಗಳು:

ಜನಾರೋಗ್ಯ ಆಂದೋಲನವು ಬೆಂಗಳೂರು ನಗರದಲ್ಲಿ ತನ್ನ ಚಟುವಟಿಕೆಗಳ ಆಧಾರದಿಂದ ಮತ್ತು ಈ ಸಾರ್ವಜನಿಕ ಸಮಾಲೋಚನೆಯಲ್ಲಿ ಜನರಿಂದ ಬಂದ ಸಲಹೆಗಳನ್ನಾಧರಿಸಿ ಈ ಕೆಳಗಿನ ಬೇಡಿಕೆಗಳನ್ನು ಮುಂದಿಡುತ್ತಿದೆ.

- ಬೆಂಗಳೂರು ನಗರದಲ್ಲಿ ಜನಸಂಖ್ಯೆಯನ್ನಾಧರಿಸಿ ಆರೋಗ್ಯ ಯೋಜನೆಗಳನ್ನು ರೂಪಿಸಬೇಕು.
- 50,000 ಜನಸಂಖ್ಯೆಗೆ ಅಥವಾ ಒಂದು ವಾರ್ಡ್‌ಗೆ ಒಂದು ಪ್ರಾಥಮಿಕ ಕೇಂದ್ರವನ್ನು ಸ್ಥಾಪಿಸಿ ಅಲ್ಲಿ ಸಮಗ್ರ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ಒದಗಿಸಬೇಕು.
- ನಗರದಲ್ಲಿ ಆರೋಗ್ಯ ಸೇವೆಯನ್ನು ಒದಗಿಸುತ್ತಿರುವ ಇತರ ಎಲ್ಲ ಸರ್ಕಾರದ ಇಲಾಖೆ/ಸಂಸ್ಥೆಗಳು ತಮ್ಮ ಜಂಟಿ ಕ್ರಿಯಾಯೋಜನೆಗಳನ್ನು ಇವುಗಳಿಗಾಗಿ ಅಗತ್ಯ ವಿತ್ತವನ್ನ ನಿಗದಿಪಡಿಸಬೇಕು:
    - ಸೇವೆಗಳಿಲ್ಲದ ವಾರ್ಡ್‌ಗಳಿಗೆ ಸೇವೆ ಒದಗಿಸಲು
    - ಸೇವೆ, ಸಿಬ್ಬಂದಿ, ಉಪಕರಣ, ಮೂಲಸೌಕರ್ಯ ಮುಂತಾದ ಕೊರತೆಗಳನ್ನು ನೀಗಿಸಲು
    - ಕಾರ್ಯೋನ್ಮುಖವಾದ ಮತ್ತು ಸಧೃಡ ರೆಫರಲ್ ವ್ಯವಸ್ಥೆ ಸ್ಥಾಪಿಸಲು
    - ಕುಂದುಕೊರತೆ ನಿವಾರಣೆಗಾಗಿ ಸೂಕ್ತ ವ್ಯವಸ್ಥೆ ಸ್ಥಾಪಿಸಲು
- ಪ್ರತಿಯೊಂದು ಇಲಾಖೆಯೂ ತನ್ನ ಶಾಖಾ ಮಟ್ಟದ ಆಯವ್ಯಯ ಮಾಹಿತಿಯನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡಬೇಕು.
- ವಸತಿಹೀನರು, ಹೆಚ್‌ಐವಿ ಪೀಡಿತರು ಮತ್ತು ವಿಕಲಚೇತನರು ಮುಂತಾದ ದುರ್ಬಲ ವರ್ಗದವರ ಅಗತ್ಯಗಳನ್ನು ಕೂಡ ಪೂರೈಸಲು ಶಕ್ತವಾಗಿರಬೇಕು.

- ಆರೋಗ್ಯ ವಿಮಾ ಯೋಜನೆಗಳು ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಎಂದೂ ಪರ್ಯಾಯವಲ್ಲ. ಸರ್ಕಾರವು ತನ್ನ ಸಾರ್ವಜನಿಕ ಆರೋಗ್ಯ ಸೇವೆಗಳನ್ನು ಬಲಪಡಿಸಿ ಆಸ್ಪತ್ರೆಗಳಲ್ಲಿ ರೋಗಿಗಳು ದಾಖಲಾಗುವುದನ್ನು ಮತ್ತು ದುಬಾರಿ ಮೂರನೇ ಹಂತದ ಸೇವೆಗಳಿಗೆ ಮೊರೆಹೋಗುವುದನ್ನು ತಪ್ಪಿಸಬೇಕೆಂದು ನಾವು ಒತ್ತಾಯಿಸುತ್ತೇವೆ.